ಶ್ರೀ ಕಾಗೋಡು ತಿಮ್ಮಪ್ಪ.—ಈ ನಕ್ಕರೆ ಕಾರ್ಖಾನೆಯವರು ಈ ಭೂಮಿಯನ್ನೆಲ್ಲಾ ದುಡ್ಡುಕೊಟ್ಟು ಕೊಂಡಿದ್ದಾರೆಯೇ ಅಥವಾ ಹಾಗೇ ಸರ್ಕಾರದವರು ಕೊಟ್ಟಿದ್ದೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರದವರು ಅವರಿಗೆ ಯಾವ ಕಿಮ್ಮತ್ತನ್ನೂ ಪಡೆಯದೆ ಕೊಟ್ಟಿರತಕ್ಕ ಭೂಮಿ ಎಂದರೆ—372 ಎಕರೆ ಐಷ್ಕಿ ಮತ್ತು 10 ಎಕರೆ ತರ್ಕಿ. ಇನ್ನುಳಿದುದನ್ನು ಅವರು ಕ್ರಯಕ್ಕೆ ಪಡೆದಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕಿಮ್ಮತ್ತು ಕೊಡದೆ ಪಡೆದಿರತಕ್ಕ ಭೂಮಿಯನ್ನು ಮತ್ತು ಆ ಕಾರ್ಖಾನೆಗೆ ಎಷ್ಟು ಬಿಡಬೇಕೋ ಅಷ್ಟನ್ನು ಮಾತ್ರ ಬಿಟ್ಟು ಉಳಿದದನ್ನು ಸರ್ಕಾರದವರು ಏಕೆ ಅವರಿಂದ ವಶಪಡಿಸಿಕೊಳ್ಳಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಧ್ಯಕ್ಕೆ ಆ ಪ್ರಶ್ನೆ ಇದಕ್ಕೆ ನೇರವಾಗಿ ಸಂಬಂಧಪಡುವುದಿಲ್ಲ. ಮುಂದೆ ಭೂಸುಧಾರಣೆ ಕಾನೂನು ಜಾರಿಗೆ ಬಂದಾಗ ಅದರಂತೆ ಕ್ರಮ ಕೈಗೊಳ್ಳಬಹುದು.

Illegal Occupation of Government Land by Land Lords in Hittinahal Circle

379. Sri M. VIRUPAKSHAPPA (Koppal).—

(*a*) whether big landlords in Hittinahal Circle in the Ayakat area of Koppal Taluk have illegally occupied Government lands and cultivating heavy irrigation crops ;

(*b*) if so, the extent of such land under illegal occupation ;

(*c*) whether Government has started Proceedings against them for eviction from these illegal occupation ;

(*d*) if not, the reasons for not taking any action against these illegal occupants ?

Sri N. HUTCHAMASTHY GOWDA (Minister for Revenue).—

(*a*) Yes.

(*b*) A—G
63-33.

(*c*) Yes.

(*d*) Does not arise.

ಶ್ರೀ ಎಂ. ವಿರೂಪಾಕ್ಷಪ್ಪ.—ಈ ಅತಿಕ್ರಮ ಪ್ರವೇಶ ಮಾಡಿರತಕ್ಕ ಭೂಮಿಯನ್ನು ವಾಪಸ್ ಪಡೆಯುವುದರಲ್ಲಿ ಏಕೆ ನಿಧಾನವಾಗಿದೆ ? ಏನು ಕಾರ್ಯಕ್ರಮಗಳನ್ನು ಸರ್ಕಾರ ಇಲ್ಲಿಯವರೆಗೆ ಕೈಗೊಂಡಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಒಟ್ಟು 11 ಜನರು ಭೂಮಿಯನ್ನು ಆಕ್ರಮವಾಗಿ ಆಕ್ರಮಣ ಮಾಡಿಕೊಂಡಿದ್ದಾರೆ. ಅವರಲ್ಲಿ ಭೀಮಣ್ಣ ಅನ್ನತಕ್ಕವರ ಸ್ವಾಧೀನದಲ್ಲಿರತಕ್ಕ ಭೂಮಿಯ ಬಗ್ಗೆ ಹೈಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿದೆ. ಇನ್ನುಳಿದವರ ಬಗ್ಗೆ ಭೂಮಿ ಯನ್ನು ಸ್ವಾಧೀನಪಡೆಯಲು ಕ್ರಮ ಕೈಗೊಳ್ಳಲಾಗಿದೆ.